## ಗುಣಮಟ್ಟದ ರೇಷ್ಮೆ ಗೂಡಿನ ಉತ್ಪಾದನೆ




ಗುಣಮಟ್ಟದ ಗೂಡುಗಳ ಲಕ್ಷಣಗಳೆಂದರೆ, ಗಾತ್ರ ಮತ್ತು ಆಕಾರದಲ್ಲಿ ಏಕರೂಪತೆ, ಕವಚದ ಮಂದತೆ, ಗಟ್ಟಿಯಾಗಿರುವಿಕೆ, ಹೆಚ್ಚಾದ ನೂಲಿನ ಇಳುವರಿ, ಕವಚದ ಅನುಪಾತ ಮತ್ತು ಕಡಿಮೆ ದೋಷಯುಕ್ತ ಗೂಡುಗಳು

- ಗುಣಮಟ್ಟದ ಗೂಡುಗಳನ್ನು ಪಡೆಯಲು ಸೂಕ್ತವಾದ ಚಂದ್ರಿಕೆಗಳನ್ನು ಬಳಸಿ
- ಬೆಳೆದ ರೇಷ್ಮೆ ಹುಳುಗಳನ್ನು ಸರಿಯಾದ ಸಮಯದಲ್ಲಿ ಚಂದ್ರಿಕೆಗೆ ವರ್ಗಾಯಿಸಿ
- ಗುಣಮಟ್ಟದ ಗೂಡುಗಳು ಮಾರುಕಟ್ಟೆಯಲ್ಲಿ ಹೆಚ್ಚಿನ ಆದಾಯವನ್ನು ತರುತ್ತವೆ



## ಮಡಿಸಲಾಗುವ ಪ್ಲಾಸ್ಟಿಕ್ ಚಂದ್ರಿಕೆಗಳು



ಪ್ರಸ್ತುತ ಹೆಚ್ಚಿನ ರೈತರು ಗೂಡು ಕಟ್ಟಿಸಲು ಮಡಿಸಲಾಗುವ ಪ್ಲಾಸ್ಟಿಕ್ ಚಂದ್ರಿಕೆಗಳನ್ನು ಉಪಯೋಗಿಸುತ್ತಿದ್ದಾರೆ

- ಈ ವಿಧಾನದಲ್ಲಿ ರೇಷ್ಮೆ ಹುಳುಗಳು ಹಣ್ಣಾಗುವ ಲಕ್ಷಣ ಕಾಣಿಸಿಕೊಂಡಾಗ ಹಾಸಿಗೆ ಮೇಲೆ ಪ್ಲಾಸ್ಟಿಕ್ ಚಂದ್ರಿಕೆಗಳನ್ನು ಹರಡಬೇಕು
- ಈ ಚಂದ್ರಿಕೆಗಳನ್ನು ಉಪಯೋಗಿಸಲು ಹಾಗೂ ಸೋಂಕು ನಿವಾರಣೆ ಮಾಡಲು ಬಹಳ ಸುಲಭ. ಸಂಗ್ರಹಣೆಗೆ ಕಡಿಮೆ ಸ್ಥಳಾವಕಾಶ ಸಾಕು
- ಈ ಚಂದ್ರಿಕೆಗಳನ್ನು ಹುಳು ಹಾಸಿಗೆಗಳ ಮೇಲೆ ಹರಡುವುದರಿಂದ ಗೂಡು ಕಟ್ಟಲು ಪ್ರತ್ಯೇಕ ಸ್ಥಳದ ಅಗತ್ಯವಿರುವುದಿಲ್ಲ
- ಈ ಚಂದ್ರಿಕೆಗಳಲ್ಲಿ ದೋಷಪೂರಿತ ಗೂಡುಗಳ ಸಂಖ್ಯೆ ತುಂಬಾ ಕಡಿಮೆ
- ಶ್ರಮ ಮತ್ತು ಮಾನವ ಶಕ್ತಿಯ ವೆಚ್ಚ ಕಡಿಮೆ



## ತಿರುಗುವ (ರೋಟರಿ) ಚಂದ್ರಿಕೆಗಳು



- ಈ ಚಂದ್ರಿಕೆಗಳನ್ನು ಉತ್ತಮ ಗುಣಮಟ್ಟದ ಕಾರ್ಡ್ ಬೋರ್ಡ್ ಗ್ರಿಲ್‌ಗಳನ್ನು ಮರದ ಚೌಕಟ್ಟಿನೊಂದಿಗೆ ಸೇರಿಸಿ ಮಾಡಲಾಗಿದೆ.
- ಕೊನೆಯ ಆಹಾರದ ನಂತರ ಹಾಸಿಗೆ ಮೇಲೆ ನೈಲಾನ್ ಬಲೆಗಳನ್ನು ಹರಡಿ ಹಣ್ಣು ಹುಳುಗಳನ್ನು ಸಂಗ್ರಹಿಸಲಾಗುತ್ತದೆ ಹಾಗೂ ಸುಮಾರು 2 ಗಂಟೆಗಳ ನಂತರ ಅವನ್ನು ರೋಟರಿ ಚಂದ್ರಿಕೆಗಳ ಮೇಲೆ ಬಿಡಲಾಗುತ್ತದೆ.
- ಪ್ರತೀ ರೋಟರಿ ಚಂದ್ರಿಕೆ ಸೆಟ್ ನಲ್ಲಿ 10 ಕಾರ್ಡ್ ಬೋರ್ಡ್ ಗ್ರಿಲ್ ಗಳಿದ್ದು (ಪ್ರತಿ ಗ್ರಿಲ್ ನಲ್ಲಿ 156 ಕೋಶಗಳಂತೆ) ಒಟ್ಟಾರೆಯಾಗಿ 1560 ಕೋಶಗಳು ಮರದ ಚೌಕಟ್ಟಿನೊಂದಿಗೆ ಜೋಡಣೆಯಾಗಿರುತ್ತದೆ.



- ಎಲ್ಲಾ ಹುಳುಗಳು ರೋಟರಿ ಚಂದ್ರಿಕೆಯ ಮೇಲೆ ಹತ್ತಿದ ನಂತರ ಈ ಚಂದ್ರಿಕೆಗಳನ್ನು ಮೇಲ್ಚಾವಣಿಗೆ ಸರಳುಗಳ ಸಹಾಯದಿಂದ 3–4 ಅಂತಸ್ತುಗಳಲ್ಲಿ ನೇತು ಹಾಕಬೇಕು
- ರೇಷ್ಮೆ ಹುಳುಗಳು ಚೌಕಟ್ಟುಗಳಲ್ಲಿ ಸೇರಿಕೊಂಡು ಗೂಡು ಕಟ್ಟುವ ಸಲುವಾಗಿ ಮೇಲೆ ಚಲಿಸಲು ಪ್ರಾರಂಭಿಸುವುದರಿಂದ ಚಂದ್ರಿಕೆಗಳು ತಿರುಗಲು ಕಾರಣವಾಗುತ್ತವೆ. ಆದ್ದರಿಂದ ಇವನ್ನು ತಿರುಗುವ ಚಂದ್ರಿಕೆಗಳೆಂದು ಕರೆಯುತ್ತಾರೆ.
- ಗೂಡು ಬಿಡಿಸಲು ಹಾಗೂ ಸೋಂಕು ನಿವಾರಿಸಲು ಸುಲಭ
- ಕಾರ್ಡ್ ಬೋರ್ಡ್ ಗ್ರಿಲ್ ಹಾಗೂ ಮರದ ಚೌಕಟ್ಟುಗಳೆರಡನ್ನೂ ಮಡಿಸಬಹುದಾದ್ದರಿಂದ ಶೇಖರಿಸಿ ಇಡಲು ಸುಲಭ
- 250 ಮೊಟ್ಟೆ ಹುಳು ಸಾಕಾಣಿಕೆಗೆ 100 ರೋಟರಿ ಚಂದ್ರಿಕೆಯು ಸೆಟ್ ಗಳು ಬೇಕಾಗುವುದು.
- ದೋಷಪೂರಿತ ಗೂಡುಗಳ ಪ್ರಮಾಣ ಕಡಿಮೆಯಾಗಿರುತ್ತದೆ ಹಾಗೂ ನೂಲು ಬಿಚ್ಚಾಣಿಕೆಯಲ್ಲಿ ಸುಧಾರಣೆ ಕಂಡುಬರುತ್ತದೆ
- ಇದರಿಂದ ಮಾರುಕಟ್ಟೆಯಲ್ಲಿ ಕೆ.ಜಿ. ಯೊಂದಕ್ಕೆ ರೂ.40 ರಿಂದ 50 ರಷ್ಟು ಹೆಚ್ಚಿನ ಬೆಲೆ ಸಿಗಲಿದೆ

**ಗೂಡು ಬಿಡಿಸುವುದು**

- ಹುಳುಗಳು ಗೂಡು ಕಟ್ಟಲು ಪ್ರಾರಂಭಿಸಿದ 6 ನೇ ಅಥವಾ 7 ನೇ ದಿನ ಗೂಡು ಬಿಡಿಸಬೇಕು.
- ಆದರೆ ಬಿತ್ತನೆಗಾಗಿ ಬೆಳೆದ ಗೂಡುಗಳನ್ನು 8 ನೇ ಅಥವಾ 9 ನೇ ದಿನ ಬಿಡಿಸಬೇಕು
- ಕಾರ್ಡ್ ಬೋರ್ಡ್ ಗ್ರಿಲ್ ಗಳನ್ನು ಮರದ ಚೌಕಟ್ಟಿನಿಂದ ಬೇರ್ಪಡಿಸಿ ಅದರಿಂದ ಜಲ್ಲಿ ಗೂಡು ಹಾಗು ಸತ್ತಿರುವ ಹುಳುಗಳನ್ನು ತೆಗೆದುಬಿಡಿ
- ಗೂಡುಗಳನ್ನು ಹೊಂದಿರುವ ಕಾರ್ಡ್ ಬೋರ್ಡ್ ಗ್ರಿಲ್‌ನ್ನು ಚೌಕಟ್ಟಿನ ಮೇಲೆ ಇರಿಸಿ ಒತ್ತುವ ಸಾಧನದಿಂದ ಗೂಡುಗಳ ಮೇಲೆ ಒತ್ತಡ ಹಾಕಿ ತೆಗೆಯಬೇಕು
- ಪ್ಲಾಸ್ಟಿಕ್ ಚಂದ್ರಿಕೆಯಲ್ಲಿ ಕಟ್ಟಿರುವ ಗೂಡುಗಳನ್ನು ಗೂಡು ಬಿಡಿಸುವ ಯಂತ್ರದಿಂದ ಸಹ ಬಿಡಿಸಬಹುದು







- ರೇಷ್ಮೆ ಗೂಡುಗಳ ಸಾಗಾಣಿಕೆ
- ವಿಂಗಡಿಸಿದ ಗೂಡುಗಳನ್ನು ಚೆನ್ನಾಗಿ ಗಾಳಿಯಾಡುವ ಚೀಲಗಳಲ್ಲಿ ಸಡಿಲವಾಗಿ ತುಂಬಿ ಶೇಖರಿಸಬೇಕು
- ಗೂಡುಗಳನ್ನು ದಿನದ ತಂಪಾದ ಹೊತ್ತಿನಲ್ಲಿ ಸಾಗಿಸಬೇಕು
- ಮಾರುಕಟ್ಟೆ ತಲುಪಿದ ತಕ್ಷಣವೇ ಚೀಲದ ಬಾಯಿಯನ್ನು ತೆಗೆದು ಗೂಡುಗಳನ್ನು ಚರಣಿಕೆಗಳ ಮೇಲೆ ಹರಡಿ

**ರೇಷ್ಮೆ ಗೂಡಿನ ಗುಣಮಟ್ಟ ಪರೀಕ್ಷೆ**

- ಸಿ.ಎಸ್.ಟಿ.ಆರ್.ಐ., ಬೆಂಗಳೂರು ಇವರು ಮಾರುಕಟ್ಟೆಯಲ್ಲಿ ಸ್ಥಾಪಿಸಿರುವ ರೇಷ್ಮೆ ಗೂಡು ಪರೀಕ್ಷಾ ಕೇಂದ್ರದಲ್ಲಿ ಗೂಡಿನ ಗುಣಮಟ್ಟವನ್ನು ಪರೀಕ್ಷಿಸಿಕೊಳ್ಳಿ


**ಪಠ್ಯ**

ಎಸ್. ಪುರುಷೋತ್ತಮ್ ಡಿ.ಎಸ್. ಸೋಮಪ್ರಕಾಶ್
ಮತ್ತು ವಿ. ಶಿವಪ್ರಸಾದ್

ಕನ್ನಡ ಅನುವಾದ: ಜೆ.ಬಿ. ನರೇಂದ್ರ ಕುಮಾರ್



ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ

**ನಿರ್ದೇಶಕರು**

**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**

ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರ,
ಶ್ರೀರಾಂಪುರ, ಮೈಸೂರು 570 008
ದೂರವಾಣಿ: 0821–2362757, 2362406 ಫ್ಯಾಕ್ಸ್: 0821–2362845
ವೆಬ್: www.csrtimys.res.in ಇ–ಮೇಲ್: csrtimys.csb@nic.in



Copies: 500 February 2019 Design & Layout: J. Justin Kumar




# ಆರೋಹಿಸುವ ಮತ್ತು ಕೊಯಿಲು ತಾಂತ್ರಿಕತೆಯಿಂದ ಗುಣಮಟ್ಟದ ರೇಷ್ಮೆ ಉತ್ಪಾದನೆ




**ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ**

(ISO 9001: 2015 ಪ್ರಮಾಣೀಕೃತ)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ, ಮೈಸೂರು – 570008